ಕೊಡಿಸುವುದಾಗಿ ಹಿಂದೆ ಕಂದಾಯ ಮಂತ್ರಿಗಳಾಗಿದ್ದ ಮಾನ್ಯ ಬಸವಲಿಂಗಪ್ಪನವರು ಮತ್ತು ಮಾನ್ಯ ಬಂಗಾರಪ್ಪನವರು ಭರವಸೆ ಕೊಟ್ಟಿದ್ದರು ಎಂತ್ತೆ ತಾವೂ ಕೊಟ್ಟಿದ್ದೀರಿ. ಆದರೆ ಇದುವರೆಗೆ ಏಕೆ ಕೊಡಲಿಲ್ಲ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಲ್ಯಾಂಡ್ ಅಕ್ವಿಷನ್ ಪ್ರೊಸೀಡಿಂಗ್ಸ್ ಅನೇಕ ಹಂತಗಳಲ್ಲಿವೆ ೩ ಕೇಸುಗಳಲ್ಲಿ ಮಾತ್ರ ಈಗಾಗಲೇ ಫೈನ್‌ಲೈಸ್ ಆಗಿದೆ, ಉಳಿದ ೫ ಕೇಸುಗಳು ಫೈನಲ್ ನೋಟಿಫಿಕೇಷನ್ ಆಗಿ ಅವರಿಗೆ ನಾವು ಪರಿಹಾರ ಕೊಡತಕ್ಕದ್ದಾಗಿದೆ. ೩ ಕೇಸುಗಳಲ್ಲಿ ಅವಾರ್ಡ್ ಪಾಸ್ ಮಾಡಲಾಗಿದೆ, ಇರಿಗೇಷನ್ ಡಿಪಾರ್ಟ್‌ಮೆಂಟಿನವರು ಹಣ ಜಮಾ ಮಾಡಬೇಕಾಗಿತ್ತು, ಆದರೆ ಮಾಡಿಲ್ಲ. ಆದ್ದರಿಂದ ಈಗಾಗಲೇ ಅವರಿಗೆ ಪತ್ರ ಬರೆದಿದ್ದೇವೆ. ಅವರಿಂದ ಹಣ ಜಮಾ ಆದ ತಕ್ಷಣ ಪರಿಹಾರ ಧನವನ್ನು ಬಿಡುಗಡೆ ಮಾಡುತ್ತೇವೆ.

ಶ್ರೀ ಜಿ. ರಾಜೂಗೌಡ.—ಈ ರಾಜ್ಯದಲ್ಲಿ ನಿಕೃಷ್ಟವಾಗಿ ಕಡೆಗಣಿಸಿರತಕ್ಕ ವರ್ಗ ಎಂದರೆ ರೈತರು. ಅವರೆಲ್ಲ ಎಚ್ಚೆತ್ತರೆ ನಾವು, ನೀವು ಉಳಿಯುವುದಿಲ್ಲ. ಆದ್ದರಿಂದ, ಭೂಸ್ವಾಧೀನ ಪ್ರಕರಣದಲ್ಲಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡ ಒಂದು ವರ್ಷದೊಳಗೆ ಪರಿಹಾರ ಧನವನ್ನು ಕೊಡಬೇಕೆಂದು ಸಂತ್ತೋಲೆ ಕಳುಹಿಸುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನಿಯಮ ಇರುವುದು ೧೦ ತಿಂಗಳೊಳಗೆ ಕೊಡಬೇಕೆಂದು ಅದನ್ನು ರೈತರ ಸಲಹವಾಗಿಯೇ ಮಾಡಿರತಕ್ಕದ್ದು. ಆದರೆ ನೀರಾವರಿ ಇಲಾಖೆಯವರಿಂದ ಸ್ವಲ್ಪ ವಿಳಂಬವಾಗಿದೆ ಎಂಬುದನ್ನು ಒಪ್ಪುತ್ತೇನೆ. ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿ ಆದಷ್ಟು ಜಾಗ್ರತೆ ಪರಿಹಾರ ಧನವನ್ನು ಕೊಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಜಿ. ರಾಜೂಗೌಡ.—ವಿಳಂಬವೇನು ಕಡಿಮೆ ಆಗಿಲ್ಲ! ೧೦ ವರ್ಷಗಳಾಗಿದೆ. ಆಗಲೇ ೩ ಜನ ಕಂದಾಯ ಮಂತ್ರಿಗಳು ಬಂದು ಹೋದರು. ಈ ಬಗ್ಗೆ ನಾನು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದೆ. ಆದರೆ ಅದನ್ನು ಪ್ರಶ್ನೆಯ ರೂಪದಲ್ಲಿ ಕೇಳಲು ಅಧ್ಯಕ್ಷರು ಅಪ್ಪಣೆ ಕೊಡಿಸಿದರು. ಭೂಸ್ವಾಧೀನಪಡಿಸಿಕೊಂಡು ೧೦ ವರ್ಷಗಳಾದರೂ ಇನ್ನೂ ಅವರಿಗೆ ಪರಿಹಾರ ಕೊಟ್ಟಿಲ್ಲ. ಆದ್ದರಿಂದ ದಯೆ ಮಾಡಿ ಇದನ್ನು ಗಮನಿಸಬೇಕು.

ಅಧ್ಯಕ್ಷರು.—ನೀವು ಳನೇ ಕಂದಾಯ ಮಂತ್ರಿಗಳು, ನಿಮ್ಮ ಕಾಲದಲ್ಲಾದರೂ ಕೊಡುತ್ತೀರಾ ಎಂದು ಕೇಳುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮೂರು ಕೇಸುಗಳಲ್ಲಿ ನನ್ನ ಕಾಲದಲ್ಲಿ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆ. ಇನ್ನು ಉಳಿದ ೫ ಕೇಸುಗಳಿಗೆ ಅವುಗಳ ಅಕ್ವಿಸಿನ್ ಪ್ರೊಸೀಡಿಂಗ್ಸ್ ಮುಗಿದ ತಕ್ಷಣ ಕೊಡಿಸುತ್ತೇನೆಂದು ಹೇಳಿದ್ದೇನೆ.

Industria'isation of Mandya District

986 SRI M S. ATHMANANDA (Mandya).—Will the Chief Minister be pleased to state...

(a) whether it has come to the notice of Government that Mandye District is Industrially backward;

(b) the measures taken by the Government to active Industrialisation in the District?

SRI R. GUNDU RAO (Chief Minister).—

(a) and (b) Mandya Taluk of Mandya District has been consideree as Industrially backward Taluk. Accordingly, Government in their Order No. CI 141 SPC 78, dated 13th June 1980 have provided many

concessions and facilities. According to this Order, in addition to the concession *viz.* 10 per cent financial assistance, 15 per cent interest-free development loan, waving of electricity tariff free from tax, water tax concession etc., is given in addition to these concessions provision has been made for payment of 15 per cent more price while making purchase by the Government Departments in respect of products manufactured by the Industries that were established in Mandya Taluk.

ಶ್ರೀ ಎಂ.ಎಸ್. ಆತ್ಮಾನಂದ.—ನಾನು ಪ್ರಶ್ನೆ ಕೇಳಿರುವುದು ಮಂಡ್ಯ ಜಿಲ್ಲೆಯನ್ನು ಕೈಗಾರಿಕರಣ ಗೊಳಿಸುವ ಬಗ್ಗೆ. ಆದರೆ ತಮ್ಮ ಉತ್ತರದಲ್ಲಿ ಮಂಡ್ಯ ಜಿಲ್ಲೆಯ ಮಂಡ್ಯ ತಾಲ್ಲೂಕಿಗೆ ಮಾತ್ರ ಕೆಲವೊಂದು ರಿಯಾಯಿತಿಗಳನ್ನು ಕೊಟ್ಟಿರುವುದಾಗಿ ತಿಳಿಸಿದ್ದೀರಿ. ನಮ್ಮ ಜಿಲ್ಲೆಯಲ್ಲಿ ಅನೇಕ ತಾಲ್ಲೂಕುಗಳು ಬಹಳಷ್ಟು ಹಿಂದುಳಿದಿವೆ. ಅಲ್ಲಿ ಮಳೆ ಕಾಲಕ್ಕೆ ಸರಿಯಾಗಿ ಆಗುವುದಿಲ್ಲ. ಆದ್ದರಿಂದ ಈಗ ನೀವು ಏನು ಒಂದು ರಿಯಾಯಿತಿಗಳನ್ನು ಮಂಡ್ಯ ತಾಲ್ಲೂಕಿಗೆ ಕೊಟ್ಟಿದ್ದೀರಿ ಅದನ್ನು ಇತರ ತಾಲ್ಲೂಕುಗಳಿಗೂ ವಿಸ್ತರಿಸುತ್ತೀರಾ ? ಈ ರಿಯಾಯಿತಿ ಸೌಲಭ್ಯವನ್ನು ಕೊಟ್ಟ ಮೇಲೆ ಮಂಡ್ಯ ತಾಲ್ಲೂಕಿನಲ್ಲಿ ಎಷ್ಟು ಹೊಸ ಉದ್ದಿಮೆಗಳು ಪ್ರಾರಂಭವಾಗಿವೆ ?

SRI MANIKRAO PATIL.—Sir, the Government has identified about 52 taluks of the Districts which are industrially backward. The basis for identification of such places is that there should be some minimum infrastructural facilities available far the development of industries. On the basis of this, Mandya taluka of Mandya District has been identified as backward taluka and for purpose of intensifying the industrial activities in such of the Taluks the Government has announced certain incentives. Of these, one is 10% of the fixed asset subsidy will be given by the State Government and also there will be exemption for electric tax. In respect of SSI units wherever the Government is making purchases, convertion fee also will be exempred in such taluks water royalty will be exempted and stamp duty will be exempted.

ಶ್ರೀ ಎಂ.ಎಸ್. ಆತ್ಮಾನಂದ.—ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಸರಿಯಾದ ಉತ್ತರ ಸಿಗಲಿಲ್ಲ. ನಮ್ಮ ಜಿಲ್ಲೆಯಲ್ಲಿ ನಾಗಮಂಗಲ, ಕೆ.ಆರ್. ಪೇಟೆ ತಾಲ್ಲೂಕುಗಳು ಬಹಳ ಹಿಂದುಳಿದಿದೆ. ಆ ರೀತಿ ಹಿಂದುಳಿದ ತಾಲ್ಲೂಕುಗಳಿಗೆ ಪ್ರೋತ್ಸಾಹ ಕೊಡಲು ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆಯೇ ಎಂಬುದು ನನ್ನ ಪ್ರಶ್ನೆ. ಮಂಡ್ಯ ತಾಲ್ಲೂಕಿನಲ್ಲಿ ಹೊಸ ಉದ್ದಿಮೆಗಳನ್ನು ಪ್ರಾರಂಭ ಮಾಡುವುದಕ್ಕೆ ತೊಂದರೆಯಾಗುತ್ತಿದೆ. ಆದ್ದರಿಂದ ಯಾರಾದರೂ ಅಲ್ಲಿ ಉದ್ದಿಮೆಗಳನ್ನು ಪ್ರಾರಂಭ ಮಾಡಲು ಮುಂದೆ ಬಂದರೆ ಅವರಿಗೆ ಸರಿಯಾದ ಮಾಹಿತಿ, ತಾಂತ್ರಿಕ ತಿಳಿವಳಿಕೆ ಮುಂತಾದ ಸೌಲಭ್ಯಗಳು ಸಿಗುತ್ತಿಲ್ಲ. ಮತ್ತು ಬೇರೆ ಜಿಲ್ಲೆಗಳಲ್ಲಿರುವಂತೆ ಮಂಡ್ಯ ಜಿಲ್ಲೆಯಲ್ಲಿಜಿಲ್ಲಾ ಕೈಗಾರಿಕಾ ಕೇಂದ್ರ ಇಲ್ಲ.. ಆದ್ದರಿಂದ ಅಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರವನ್ನು ಪ್ರಾರಂಭ ಮಾಡುತ್ತೀರಾ ? ಹಾಗೂ ಕೈಗಾರಿಕೆ ಪ್ರಾರಂಭಿಸಲು ಮುಂದೆ ಬರುವವರಿಗೆ ಸರಿಯಾದ ತಾಂತ್ರಿಕ ಜ್ಞಾನದ ಸೌಲಭ್ಯ ಸಿಗುವಂತೆ ಏರ್ಪಾಡು ಮಾಡುತ್ತೀರಾ ?

SRI MANIKRAO PATIL.—As I have already explained, for the time being we have identified only 52 taluks in the State. There might be other taluks in the State which are backward. But in course of time the Government will consider such taluks also. As regards facility for providing necessary information for taking up industries in such

taluks, there are various agencies of the Government functioning at the District level and State level also. If the hon. Member passes on to me any specific difficulties faced in such Taluks, I will look into that matter.

Sanction of Government High School near Belambara.

1062 .SRIMATHI ANUSUYA GAJANANA SHARMA (Ankola).—Will the Minister of State for Primary and Secondary Education be pleased to state :—

(a) whether it is a fact that a Government High School at Belambara has been sanctioned though there are two High Schools near Belambara Village ;

(b) whether this has been sanctioned only to the persons belonging to Scheduled Castes. If so, the number of such families in that village ; the number of children beloging to that community going to school the total strength of children of that school ;

(c) the amount spent for that school ; the qnantum of amount that is being spent every month ; the number of children in the school ?

SMT. NAGAMMA C. KESHAVA MURTHY (Minister of State for Primary and Secondary Educati n).—

(a) The Government High School has not deen sanctioned. But, sanction has b en accorded to a private High School to be run by Jagaleeven Education Society.

(b) The school has not been sanctioned only to the people beloging to Scheduled Castes Community. As per the 1971 census, there were no families belonging to Scheduled Castes Community in that village. The Census officers have intimated that the statistics pertaining to the Scheduled Castes people as per 1981 Census are not ready. 30 students in total belonging to Scheduled Castes have been Enrolled in that school. The total number of students of the school is 40.

(c) No amount has been sanctioned by the Government. The strength of the school is 40.

ಶ್ರೀ ಪಿ. ರಾಮದೇವ್.—(ಶ್ರೀಮತಿ ಅನಸೂಯ ಗಜಾನನಶರ್ಮ ಅವರ ಪರವಾಗಿ)
ಈ ಜಗಜ್ಜೀವನ ಎಜುಕೇಷನ್ ಸೊಸೈಟಿ ಪರಿಶಿಷ್ಟ ವರ್ಗದವರಿಂದ ನಡೆಸತಕ್ಕ ಸಂಸ್ಥೆಯೆ ? ಅದರ ಉದ್ದೇಶಗಳೇನು ಎಂಬುದನ್ನು ಹೇಳುತ್ತೀರಾ ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಈ ಸಂಸ್ಥೆಯವರು ಅಲ್ಲಿ ಪ್ರೌಢಶಾಲೆಯನ್ನು ಪ್ರಾರಂಭ ಮಾಡಿದ್ದಾರೆ. ಅಲ್ಲಿರತಕ್ಕ ಮಕ್ಕಳಿಗೆ ಪ್ರೌಢ ಶಿಕ್ಷಣವನ್ನು ಕೊಡಲು ಅವಕಾಶ ಮಾಡಿ ಕೊಡಬೇಕೆಂದು ಅರ್ಜಿ ಹಾಕಿದ್ದರು. ನಾವು ಅವರಿಗೆ ೧೯೮೧-೮೨ರಲ್ಲಿ ಪರ್ಮಿಷನ್ ಕೊಟ್ಟಿದ್ದೇವೆ